# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

*(ಕರ್ನಾಟಕ ಸರ್ಕಾರ ಸ್ವಾಮ್ಯಕ್ಕೆ ಒಳಪಟ್ಟಿದೆ)*

ದೂರವಾಣಿ : 08221-224020
E-mail:aeedevanur@gmail.com

ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿ)
ಕಾ ಮತ್ತು ಪಾ. ಉಪ-ವಿಭಾಗ-2,
ಚಾವಿಸನಿನಿ, ಆರ್.ಪಿ.ರಸ್ತೆ, ನಂಜನಗೂಡು.


ಸಂಖ್ಯೆ:ಸಕಾನಿಇಂ(ವಿ)/ಸ.ಇಂ(ತಾಂ)/ನಂ.ಗೂಡು/2017-18:947-49 ದಿನಾಂಕ: 24.8.17

## ದಿನಾಂಕ 22.07.2017 ರಂದು ನಡೆದ ಜನ ಸಂಪರ್ಕ ಸಭೆಯಲ್ಲಿ ಸಲ್ಲಿಸಲಾಗಿದ್ದ ದೂರುಗಳಿಗೆ ನೀಡಿರುವ ಅನುಸರಣೆ.

**1. ಶ್ರೀ ಸಿದ್ದರಾಜು ದಾಸನೂರು ಗ್ರಾಮ, ಮೊ.ಸಂ: 9901228189. ರವರು ಮಾತನಾಡಿ .**

* ಚಿಕ್ಕಹೊಮ್ಮದ ಮೋಳೆ ಗ್ರಾಮದಲ್ಲಿ ಮನೆಗಳ ಮೇಲೆ ವಿದ್ಯುತ್ ಲೈನ್ ಹಾದುಹೋಗಿದೆ ಇದನ್ನು ತೆರವುಗೊಳಿಸಲು ಕೋರಿದರು.

**ಅನುಸರಣೆ 1:** ಚಿಕ್ಕಹೊಮ್ಮದ ಮೋಳೆ ಗ್ರಾಮದಲ್ಲಿ ಮನೆಗಳ ಮೇಲೆ ಹಾದುಹೋಗಿರುವ ವಿದ್ಯುತ್ ಲೈನ್‌ನ್ನು ತೆರವುಗೊಳಿಸಲು ಅಂದಾಜು ಪಟ್ಟಿಯನ್ನು ಸಲ್ಲಿಸಲಾಗಿದೆ.

**2. ಶ್ರೀಯುತ ಸೂರ್ಯಕುಮಾರ್ ಕಣ್ಣೇನೂರು ಗ್ರಾಮ, ಮೊ.ಸಂ: 9164187933 ರವರು ಮಾತನಾಡಿ,**

* ಕಣ್ಣೇನೂರು ಗ್ರಾಮದಲ್ಲಿ ಹೊಸ ಬಡಾವಣೆಯಲ್ಲಿ ಮನೆ ಮೇಲೆ ವಿದ್ಯುತ್ ಲೈನ್ ಹೋಗಿರುವುದನ್ನು ಸ್ಥಳಾಂತರಿಸಲು ಹಾಗೂ ಕಪ್ಪಸೋಗೆ ಗ್ರಾಮದ ಸೇತುವೆ ಮೇಲೆ ಲೈನ್ ತುಂಬಾ ದೂರ ಇದ್ದು, ಕಂಬ ಬಾಗಿದ್ದು ಅದನ್ನು ಸರಿಪಡಿಸಲು ಕೋರಿದರು.

**ಅನುಸರಣೆ 2:** ಕಣ್ಣೇನೂರು ಗ್ರಾಮದಲ್ಲಿ ಹೊಸ ಬಡಾವಣೆಯಲ್ಲಿ ಮನೆ ಮೇಲೆ ವಿದ್ಯುತ್ ಲೈನ್ ಹೋಗಿರುವುದನ್ನು ಸ್ಥಳಾಂತರಿಸಲು ಹಾಗೂ ಕಪ್ಪಸೋಗೆ ಗ್ರಾಮದ ಸೇತುವೆ ಮೇಲೆ ಲೈನ್ ತುಂಬಾ ದೂರ ಇದ್ದು, ಕಂಬ ಬಾಗಿದ್ದು ಅದನ್ನು ಸರಿಪಡಿಸಲು ಅಂದಾಜು ಪಟ್ಟಿಯನ್ನು ಸಲ್ಲಿಸಲಾಗಿದೆ.

**3. ಶ್ರೀಯುತ ಸುರೇಶ್, ನೇರಳೆ ಗ್ರಾಮ, ಮೊ.ಸಂ 990122673 ರವರು ಮಾತನಾಡಿ,**

* ಲೈನ್ ಕಂಬಗಳ ಹೋಗಿರುವ ಡಿಶ್ ಕೇಬಲ್ ತೆರವುಗೊಳಿಸಲು ಕೋರಿದರು

**ಅನುಸರಣೆ 3:** ವಿದ್ಯುತ್ ಕಂಬಗಳಲ್ಲಿ ಹೋಗಿರುವ ಡಿಶ್ ಕೇಬಲ್‌ಗಳನ್ನು ತೆರವುಗೊಳಿಸಲು ಸಂಬಂಧಪಟ್ಟ ಕೇಬಲ್ ಆಪರೇಟರ್‌ಗಳಿಗೆ ತಿಳಿಸಲಾಗಿದೆ ಹಾಗೂ ಅದಕ್ಕೆ ಸಂಬಂಧಿಸಿದ ಬಾಡಿಗೆಯನ್ನು ಪಾವತಿಸಲು ಒಪ್ಪಿರುತ್ತಾರೆ.

**4. ಶ್ರೀಯುತ ಮಲ್ಲಿಕಾರ್ಜುನ, ನೇರಳೆ, ಮೊ.ಸಂ 9972726498 ಗ್ರಾಮ. ರವರು ಮಾತನಾಡಿ,**

* ನೇರಳೆ ಗ್ರಾಮದಲ್ಲಿ 02 ಕಂಬಗಳು ಶಿಥಿಲಗೊಂಡಿದ್ದು ಇವುಗಳನ್ನು ಶೀಘ್ರವಾಗಿ ಬದಲಾಯಿಸಿಕೊಡಬೇಕೆಂದು ಕೋರಿದರು.

**ಅನುಸರಣೆ 4:** ನೇರಳೆ ಗ್ರಾಮದಲ್ಲಿ ಶಿಥಿಲಗೊಂಡಿರುವ ಕಂಬಗಳನ್ನು ಬದಲಿಸಲು ಅಂದಾಜು ಪಟ್ಟಿಯನ್ನು ಸಲ್ಲಿಸಲಾಗಿದೆ.

**5. ಶ್ರೀಯುತ ಡಿ.ರಾಮಯ್ಯ ಹುರ ಗ್ರಾಮ., ಮೊ.ಸಂ 9632412336 ರವರು ಮಾತನಾಡಿ,**

* ದೇವಸ್ಥಾನದ ಹಿಂದೆ ಇರುವ ಪರಿವರ್ತಕದ ಕಂಬವನ್ನು ಬದಲಾಯಿಸಿ ಕೊಡಬೇಕೆಂದು ಕೋರಿದರು.

**ಅನುಸರಣೆ 5:** ದೇವಸ್ಥಾನದ ಹಿಂದೆ ಇರುವ ಪರಿವರ್ತಕದ ಕಂಬವನ್ನು ಬದಲಾಯಿಸಲು ಅಂದಾಜು ಪಟ್ಟಿಯನ್ನು ಸಲ್ಲಿಸಲಾಗಿದೆ.

6. **ಶ್ರೀಯುತ ಬಸವರಾಜು ಹಲ್ಲರೆ, ಗ್ರಾಮ ಮೊ.ಸಂ 9636828514. ರವರು ಮಾತನಾಡಿ,**

* ಹಲ್ಲರೆ ಗ್ರಾಮದ ಐ.ಪಿ.ಪರಿವರ್ತಕದ DOLO ಹೋಗಿದ್ದು, ಅದನ್ನು ಬದಲಾಯಿಸಲು ಕೋರಿದರು.
* ಗಣೇಶಪ್ಪ ಮತ್ತು ದೇವರಾಜಪ್ಪ ರವರ ಮನೆಯ ಹತ್ತಿರ SAG ಇದೆ ಮತ್ತು ಮರಪ್ಪ ಮತ್ತು ನಂಜುಂಡಪ್ಪ ರವರ ಮನೆ ಬಳಿ ಕಂಬ ಹಾಳಾಗಿದೆ ಅದನ್ನು ಸರಿಪಡಿಸಲು ಕೋರಿದರು.

**ಅನುಸರಣೆ 6:** ಹಲ್ಲರೆ ಗ್ರಾಮದ ಐ.ಪಿ.ಪರಿವರ್ತಕದ DOLO ನ್ನು ಸರಿಪಡಿಸಲಾಯಿತು.

* ಗಣೇಶಪ್ಪ ಮತ್ತು ದೇವರಾಜಪ್ಪ ರವರ ಮನೆಯ ಹತ್ತಿರ SAG ಇರುವುದನ್ನು ಮತ್ತು ಮರಪ್ಪ ಮತ್ತು ನಂಜುಂಡಪ್ಪ ರವರ ಮನೆ ಬಳಿ ಕಂಬ ಹಾಳಾಗಿರುವುದನ್ನು ಸರಿಪಡಿಸಲಾಗಿದೆ.

7. **ಶ್ರೀಯುತ ಬಸವಣ್ಣ ಗಟ್ಟವಾಡಿ ಗ್ರಾಮ. ಮೊ.ಸಂ–9481529743 ರವರು ಮಾತನಾಡಿ.**

* ಗಟವಾಡಿ ಗ್ರಾಮದಲ್ಲಿ ಬೀದಿ ದೀಪಗಳು 24 ಗಂಟೆ ಉರಿಯುತ್ತಿದ್ದು, ಕಂಟ್ರೋಲ್ ಅಳವಡಿಸಿ ವಿದ್ಯುತ್ ಮತ್ತು ಹಣ ಉಳಿತಾಯ ಮಾಡಲು ಕ್ರಮ ಕೈಗೊಳ್ಳಬೇಕೆಂದು ಕೋರಿದರು.

**ಅನುಸರಣೆ 7:** ಬೀದಿ ದೀಪಗಳ ನಿರ್ವಹಣೆ ಕಾರ್ಯವು ಪಂಚಾಯತಿ ವ್ಯಾಪ್ತಿಗೆ ಒಳಪಡುವುದರಿಂದ, ಪಂಚಾಯತಿಯವರೇ ಬೀದಿ ದೀಪದ ಕಂಟ್ರೋಲ್ ಅಳವಡಿಸಲು ಕ್ರಮಕೈಗೊಳ್ಳುವುದು ಹಾಗೂ 2 & 4 ವೈರ್ ಎಲ್.ಟಿ. ಮಾರ್ಗವನ್ನು, 3 & 5 ವೈರ್ ಎಲ್.ಟಿ. ಮಾರ್ಗವಾಗಿ ಬದಲಿಸಿ ಕಂಟ್ರೋಲ್ ಅಳವಡಿಸಲು ಪಂಚಾಯತಿ ವತಿಯಿಂದಲೇ ಕ್ರಮಕೈಗೊಳ್ಳಬೇಕು ಎಂದು ತಿಳಿಸಲಾಗಿದೆ. ಹಾಗೂ ಈಗಾಗಲೇ 3 ವೈರ್ ಮಾರ್ಗವಿರುವ ಕಡೆಗೆ ಕಂಟ್ರೋಲ್ ಅಳವಡಿಸಿದ್ದು, ಈ ಕಂಟ್ರೋಲ್ ಸ್ವಿಚ್ ಅನ್ನು ಪ್ರತಿ ದಿನವೂ ಸಂಜೆ ಮತ್ತು ಬೆಳಗ್ಗೆ ಪಂಚಾಯತಿ ವತಿಯಿಂದಲೇ ಕಾರ್ಯಚಾರಣೆ ಮಾಡಲು ತಿಳಿಸಲಾಗಿದೆ.

8. **ಶ್ರೀಯುತ ಬಸವಣ್ಣ ಹಳ್ಳಿಕೆರೆಹುಂಡಿ ಗ್ರಾಮ. ಮೊ.ಸಂ–9535213170 ರವರು ಮಾತನಾಡಿ.**

* ಆಸ್ಪತ್ರೆ, ಕಾನ್ವೆಂಟ್ ಮತ್ತು ಮನೆಗಳಿಗೆ ನಿರಂತರ ಜ್ಯೋತಿ ಲೈನ್ ಚಾರ್ಜ್ ಆದ ಮೇಲೆ ಕರೆಂಟ್ ಇರುವುದಿಲ್ಲ.

**ಅನುಸರಣೆ 8:** ಆಸ್ಪತ್ರೆ, ಕಾನ್ವೆಂಟ್ ಮತ್ತು ಮನೆಗಳಿಗೆ ನಿರಂತರ ಜ್ಯೋತಿ ವಿದ್ಯುತ್ ಒದಗಿಸಲು ಈ ಸ್ಥಾವರಗಳು ಈಗಿನ ಎನ್.ಜೆ.ವೈ ಮಾರ್ಗದಿಂದ 3 ಕಿ.ಮೀ ದೂರದಲ್ಲಿರುವುದರಿಂದ ನಿಗಮದ ವತಿಯಿಂದ ವಿದ್ಯುತ್ ಒದಗಿಸಲು ಸಾಧ್ಯವಿರುವುದಿಲ್ಲ. ಹಾಗೂ ಈ ಸ್ಥಾವರಗಳಿಗೆ ನಿರಂತರ ವಿದ್ಯುತ್ ಸಂಪರ್ಕವನ್ನು ಸ್ವಯಂ ನಿರ್ವಹಣೆ ಕಾಮಗಾರಿ ಅಡಿಯಲ್ಲಿ ಪಡೆಯುವಂತೆ ತಿಳಿಸಲಾಗಿದೆ.

9. **ಶ್ರೀಯುತ ರಾಜೇಶ್ ಹರದನಹಳ್ಳಿ ಗ್ರಾಮ. ಮೊ.ಸಂ–9945158132 ರವರು ಮಾತನಾಡಿ.**

* ಹರದನಹಳ್ಳಿ ಹಾಸ್ಟಲ್ ಮತ್ತು ಹಿರಿಯ ಪ್ರಾಥಮಿಕ ಶಾಲೆಗೆ ವಿದ್ಯುತ್ ಇರುವುದಿಲ್ಲ ಇರುವುದಿಲ್ಲವೆಂದು ಕೋರಿದರು

**ಅನುಸರಣೆ 9:** ಹರದನಹಳ್ಳಿ ಹಾಸ್ಟೆಲ್ ಮತ್ತು ಹಿರಿಯ ಪ್ರಾಥಮಿಕ ಶಾಲೆಗೆ ಮೀಟರ್ ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

10. **ಶ್ರೀಯುತ ರವಿ ಹಾಡ್ಯ ಗ್ರಾಮ. ಮೊ.ಸಂ–9591580231 ರವರು ಮಾತನಾಡಿ,**

* ಬೆಂಡಗಳ್ಳಿ ಗೇಟ್ ಬಳಿ ಕಬ್ಬಿನ ತೋಟದಲ್ಲಿ Sag ಇದೆ ಹಾಗೂ ಹಾಡ್ಯ ಗ್ರಾಮದಲ್ಲಿ ಕಬ್ಬಿಣ ಕಂಬ ಮತ್ತು ಶಿಥಿಲಗೊಂಡ ಕಂಬವನ್ನು ಸ್ಥಳಾಂತರಿಸಲು ಕೋರಿದರು.

**ಅನುಸರಣೆ 10:** ಬೆಂಡಗಳ್ಳಿ ಗೇಟ್ ಬಳಿ ಕಬ್ಬಿನ ತೋಟದಲ್ಲಿ Sag ಇರುವುದನ್ನು ಹಾಗೂ ಹಾಡ್ಯ ಗ್ರಾಮದಲ್ಲಿ ಕಬ್ಬಿಣ ಕಂಬ ಮತ್ತು ಶಿಥಿಲಗೊಂಡ ಕಂಬವನ್ನು ಸ್ಥಳಾಂತರಿಸಲಾಗಿದೆ.

11. ಶ್ರೀಯುತ ಮಹದೇವಸ್ವಾಮಿ ಅಂಬಳೆ ಗ್ರಾಮ. ಮೊ.ಸಂ- 9739703683 ರವರು ಮಾತನಾಡಿ,

* ಸೂರಳ್ಳಿ ಅಂಬಳೆ ರಸ್ತೆಯಲ್ಲಿ ಡಾಂಬರೀಕರಣ ನಡೆಯುತ್ತಿದ್ದು ಕೆರೆಯ ಮೂಲೆಯಲ್ಲಿ ಕಂಬವನ್ನು ಬದಲಾಯಿಸಲು ಕೋರಿದರು.

* ಹುಸ್ಕೂರು ನಿಂದ ಹುರಾ ರಸ್ತೆಯಲ್ಲಿ ಅಂಬೇಡ್ಕರ್ ಬೀದಿಯ ಮುಂದೆ Sag ಇದೆ ಅನ್ನು ಸರಿಪಡಿಸಲು ಕೋರಿದರು.

**ಅನುಸರಣೆ 11:** * ಸೂರಳ್ಳಿ ಅಂಬಳೆ ರಸ್ತೆಯಲ್ಲಿ ಡಾಂಬರೀಕರಣ ನಡೆಯುತ್ತಿದ್ದು ಕೆರೆಯ ಮೂಲೆಯಲ್ಲಿ ಕಂಬವನ್ನು ಬದಲಾಯಿಸಲಾಯಿತು.

* ಹುಸ್ಕೂರು ನಿಂದ ಹುರಾ ರಸ್ತೆಯಲ್ಲಿ ಅಂಬೇಡ್ಕರ್ ಬೀದಿಯ ಮುಂದೆ Sag ಇರುವುದನ್ನು ಸರಿಪಡಿಸಲಾಯಿತು.

12. ಶ್ರೀಯುತ ಇರ್ಫಾನ್ ಗಾಂಧಿ ಗ್ರಾಮ. ಮೊ.ಸಂ- 9880342302 ರವರು ಮಾತನಾಡಿ,

* ಗಾಂಧಿಗ್ರಾಮದಲ್ಲಿ ಪರಿವರ್ತಕದ ವಿಫಲಗೊಂಡಿದೆ ಅದನ್ನು ಬದಲಾಯಿಸಿಕೊಡಬೇಕೆಂದು ಕೋರಿದರು.

**ಅನುಸರಣೆ 12:** ಗಾಂಧಿಗ್ರಾಮದಲ್ಲಿ ಪರಿವರ್ತಕದ ವಿಫಲಗೊಂಡಿದ್ದು ಅದನ್ನು ಬದಲಾಯಿಸಲಾಗಿದೆ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ).,
ಸೆಸ್ಕ್, ಕಾರ್ಯ ಮತ್ತು ಪಾಲನಾ ಉಪವಿಭಾಗ-2,
ನಂಜನಗೂಡು.

**ಪ್ರತಿಯನ್ನು:**

1. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ).ಸೆಸ್ಕ್, ಕಾರ್ಯ ಮತ್ತು ಪಾಲನಾ ಉಪವಿಭಾಗ-2, ನಂಜನಗೂಡು.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ). ಸೆಸ್ಕ್ ಕಾರ್ಯ ಮತ್ತು ಪಾಲನಾ ವಿಭಾಗ ನಂಜನಗೂಡುರವರ ಅವಗಾಹನೆಗಾಗಿ.
3. ಶಾಖಾಧಿಕಾರಿಗಳು ಕಾರ್ಯ ಮತ್ತು ಪಾಲನಾ ಘಟಕ ಹುಲ್ಲಹಳ್ಳಿ/ಹುರ/ಚಂದ್ರವಾಡಿ/ತಗಡೂರು/ಬದನವಾಳು ಶಾಖೆರವರಿಗೆ ಸೂಕ್ತ ಕ್ರಮ ಕೈಗೊಳ್ಳಲು.
4. ಮು.ಕ/ಸ.ಇಂ(ತಾ)